# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 585 |
| 2. ಸದಸ್ಯರ ಹೆಸರು | : | ಶ್ರೀ ಡಿ.ಟಿ. ಶ್ರೀನಿವಾಸ್ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ) |
| 3. ಉತ್ತರಿಸಬೇಕಾದ ದಿನಾಂಕ | : | 20.08.2026 |
| 4. ಉತ್ತರಿಸುವ ಸಚಿವರು | : | ಗೃಹ ಸಚಿವರು |

*****

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಬೆಂಗಳೂರು ನಗರ ಮತ್ತು ರಾಜ್ಯ ಪೊಲೀಸ್ ಇಲಾಖೆಯಲ್ಲಿ 31 ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದು, 7 ವರ್ಷಗಳಿಂದ ಸಿವಿಲ್ ASI ಆಗಿ ಕರ್ತವ್ಯ ನಿರ್ವಹಿಸುತ್ತಿರುವ ASI ಇಂದ PSI ಗೆ ಯಾವ ಕಾಲಮಿತಿಯೊಳಗೆ ಮುಂಬಡ್ತಿ ನೀಡಲಾಗುವುದು; | ಪ್ರಸ್ತುತ ರಾಜ್ಯ ಪೊಲೀಸ್ ಇಲಾಖೆಯ ಬೆಂಗಳೂರು ನಗರ ಘಟಕದಲ್ಲಿ 29 ವರ್ಷ ಸೇವೆ ಸಲ್ಲಿಸಿರುವ (ಎಎಸ್ಐ ಹುದ್ದೆಯಲ್ಲಿ 6 ವರ್ಷ 7 ತಿಂಗಳು) ಹಾಗೂ ಇತರೆ ಘಟಕಗಳಲ್ಲಿ ಸುಮಾರು 31 ವರ್ಷ (ಎಎಸ್ಐ ಹುದ್ದೆಯಲ್ಲಿ 08 ವರ್ಷಗಳ) ಸೇವೆಯನ್ನು ಪೂರೈಸಿರುವ ಎಎಸ್ಐ ರವರುಗಳಿಗೆ ಮುಂಬಡ್ತಿ ನೀಡಲಾಗುತ್ತಿದೆ.<br>ರಾಜ್ಯದಲ್ಲಿ ಹುದ್ದೆಯಾಧಾರಿತ ನೇಮಕಾತಿ ಮತ್ತು ಮುಂಬಡ್ತಿ ನಿಯಮಗಳು ಜಾರಿಯಲ್ಲಿರುವುರಿಂದ ಪಿಎಸ್ಐ ಮುಂಬಡ್ತಿ ಹುದ್ದೆಗೆ ಮಾತ್ರ ಮುಂಬಡ್ತಿ ನೀಡಲು ಪರಿಗಣಿಸಲು ಅವಕಾಶವಿರುತ್ತದೆ. ಸದರಿ ಮುಂಬಡ್ತಿಯನ್ನು ಪಿಎಸ್ಐ ಮುಂಬಡ್ತಿ ರಿಕ್ತ ಹುದ್ದೆಯ ಲಭ್ಯತೆ ಹಾಗೂ ಜೇಷ್ಠತೆಯ ಆಧಾರದ ಮೇಲೆ ವೃಂದ ಮತ್ತು ನೇಮಕಾತಿ ನಿಯಮಾನುಸಾರ ಕನಿಷ್ಠ 4 ವರ್ಷಗಳ ಸೇವೆಯನ್ನು ಪೂರೈಸಿ ಅರ್ಹರಾಗಿರುವ ಎಎಸ್ಐ ರವರುಗಳಿಗೆ ಮಾತ್ರ ಪಿಎಸ್ಐ ಹುದ್ದೆಯ ಮುಂಬಡ್ತಿ ನೀಡಲಾಗುತ್ತಿದೆ..<br>ಈ ಹಿನ್ನಲೆಯಲ್ಲಿ 7 ವರ್ಷದ ಸೇವೆಯನ್ನು ಪೂರೈಸಿರುವ ಎಎಸ್ಐ ರವರುಗಳಿಗೆ ನಿರ್ದಿಷ್ಟವಾಗಿ ಮುಂಬಡ್ತಿ ನೀಡುವ ಕಾಲಮಿತಿಯನ್ನು ನಿಗದಿಪಡಿಸಲು ಸಾಧ್ಯವಾಗುವುದಿಲ್ಲ. |
| ಆ | ರಾಜ್ಯದ ವಿವಿಧ ಸರ್ಕಾರಿ ಇಲಾಖೆಗಳ ನೇರ ನೇಮಕಾತಿ ಮತ್ತು ಮುಂಬಡ್ತಿ ಹುದ್ದೆಗಳು ಶೇಕಡ 50/50ರಷ್ಟು ಇದ್ದು, ಪೊಲೀಸ್ ಇಲಾಖೆಯಲ್ಲಿ ಮಾತ್ರ 70/30 ರಷ್ಟಿದ್ದು, ಇಲಾಖೆಯಲ್ಲಿ ಶೇಕಡವಾರು ಹೆಚ್ಚಿನ ಪದವೀಧರರಾಗಿರುತ್ತಾರೆ. ಈ ತಾರತಮ್ಯವನ್ನು ಸರಿಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; | ಪ್ರಸ್ತುತ ಇಲಾಖೆಯ ಪಿಎಸ್ಐ ವೃಂದದ ಹುದ್ದೆಗಳಿಗೆ ಶೇಕಡಾ 30 ರಷ್ಟನ್ನು ಇಲಾಖೆಯ ಸಿಬ್ಬಂದಿಗಳ ಮುಂಬಡ್ತಿಯಿಂದ ಹಾಗೂ ಶೇಕಡಾ 10 ರಷ್ಟನ್ನು ಇಲಾಖೆಯ ಸೇವಾನಿರತ ಸಿಬ್ಬಂದಿಗಳ ನೇರ ನೇಮಕಾತಿಯಿಂದ ಭರ್ತಿ ಮಾಡುತ್ತಿರುವುದರಿಂದ ಒಟ್ಟು ಶೇಕಡಾ 40 ರಷ್ಟು ಹುದ್ದೆಗಳು ಈಗಾಗಲೇ ಇಲಾಖೆಯ ಸಿಬ್ಬಂದಿಗಳಿಂದಲೇ ಭರ್ತಿಯಾಗುತ್ತಿದೆ. |

| | | | |
|---|---|---|---|
| | | | ಅಲ್ಲದೇ, ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯಲ್ಲಿ ಪಿ.ಎಸ್.ಐ (ಸಿವಿಲ್) ಹುದ್ದೆಯು ಪ್ರಮುಖ ಹುದ್ದೆಯಾಗಿದ್ದು, ಸಂಬಂಧಪಟ್ಟ ಠಾಣಾ ವ್ಯಾಪ್ತಿಯ ಸಂಪೂರ್ಣ ಕಾನೂನು ಮತ್ತು ಸುವ್ಯವಸ್ಥೆಯ ನಿರ್ವಹಣೆ, ಅಪರಾಧ ತಡೆಗಟ್ಟುವಿಕೆ, ಅಪರಾಧ ಪ್ರಕರಣಗಳ ಪತ್ತೆ ಮತ್ತು ತನಿಖೆ, ಸಂಚಾರ ನಿರ್ವಹಣೆಯು ಇವರ ಮುಖ್ಯ ಕರ್ತವ್ಯವಾಗಿರುತ್ತದೆ. ಈ ಕರ್ತವ್ಯಗಳನ್ನು ನಿರ್ವಹಿಸಲು ದೈಹಿಕವಾಗಿ ಮತ್ತು ಮಾನಸಿಕವಾಗಿ ಸದೃಢರಾದ ಹಾಗೂ ತಾಂತ್ರಿಕ ನೈಪುಣ್ಯತೆಯುಳ್ಳ ಯುವ ಅಧಿಕಾರಿಗಳ ಅವಶ್ಯಕತೆ ಇರುತ್ತದೆ. ಅಲ್ಲದೇ ಇತ್ತೀಚಿನ ದಿನಗಳಲ್ಲಿ ಅಪರಾಧ ಪ್ರಕರಣಗಳು ಹೆಚ್ಚಿನ ತಾಂತ್ರಿಕತೆಯಿಂದ ಕೂಡಿದ್ದು, ಇಂತಹ ಪ್ರಕರಣಗಳ ಪತ್ತೆಗೆ ಹೆಚ್ಚಿನ ತಾಂತ್ರಿಕ ಅರಿವು ಹಾಗೂ ವಿದ್ಯಾರ್ಹತೆಯುಳ್ಳ ಯುವಕರ ಅವಶ್ಯಕತೆ ಇರುತ್ತದೆ.<br><br>ಸಾಮಾನ್ಯವಾಗಿ ಪೊಲೀಸ್ ಕಾನ್ಸಟೇಬಲ್ ವೃಂದದ ಸಿಬ್ಬಂದಿಗಳು ಕ್ರಮವಾಗಿ ಹೆಡ್ ಕಾನ್ಸ್‌ಟೇಬಲ್ ಮತ್ತು ಎಎಸ್ಐ ಹುದ್ದೆಗಳಿಗೆ 02 ಮುಂಬಡ್ತಿಯನ್ನು ಹೊಂದಿ ನಂತರ ಪಿ.ಎಸ್.ಐ(ಸಿವಿಲ್) ಹುದ್ದೆಗೆ ಅರ್ಹರಾಗುತ್ತಾರೆ. ಇವರ ಶಿಕ್ಷಣವು ಮೂಲ ಹುದ್ದೆಯ ಕನಿಷ್ಠ ಮಟ್ಟದ್ದಾಗಿರುವುದರಿಂದ (ಕಾನ್ಸ್‌ಟೇಬಲ್ ಹುದ್ದೆಗೆ ಪಿಯುಸಿ ವಿದ್ಯಾರ್ಹತೆ ಮತ್ತು ಪಿಎಸ್ಐ ಹುದ್ದೆಗೆ ಪದವಿ ವ್ಯಾಸಂಗದ ವಿದ್ಯಾರ್ಹತೆ ಇರುತ್ತದೆ) ಪ್ರಸ್ತುತ ವರದಿಯಾಗುತ್ತಿರುವ ಅಪರಾಧ ಪ್ರಕರಣ ಬೇದಿಸುವುದು ಕಷ್ಟಸಾಧ್ಯವಾಗಿರುತ್ತದೆ.<br><br>ಪೊಲೀಸ್ ಇಲಾಖೆಯ ಕಾರ್ಯ ನಿರ್ವಹಣೆ ಹಾಗೂ ಇತರ ಇಲಾಖೆಗಳ ಕಾರ್ಯನಿರ್ವಹಣೆಗೂ ಸಾಕಷ್ಟು ವ್ಯತ್ಯಾಸವಿರುವುದರಿಂದ ಪೊಲೀಸ್ ಇಲಾಖೆಯ ಪಿಎಸ್ಐ ಹುದ್ದೆಯನ್ನು ಇತರ ಇಲಾಖೆಯ ಹುದ್ದೆಗಳೊಂದಿಗೆ ಹೋಲಿಸುವುದು ಸೂಕ್ತವಾಗಿರುವುದಿಲ್ಲ.<br><br>ಈ ಹಿನ್ನಲೆಯಲ್ಲಿ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಪಿಎಸ್ಐ ಹುದ್ದೆಗೆ ಅನುಭವವುಳ್ಳ ಮತ್ತು ಯುವ ಅಧಿಕಾರಿಗಳನ್ನು ಪರಿಗಣಿಸಿ ನೇರ ನೇಮಕಾತಿ |

| | | |
|---|---|---|
| | | ಮತ್ತು ಮುಂಬಡ್ತಿಗೆ ಶೇಕಡಾ 70:30ರ ಅನುಪಾತವನ್ನು ನಿಗದಿಪಡಿಸಲಾಗಿದ್ದು, ಸದರಿ ಅನುಪಾತ ನಿಗದಿಯು ಇಲಾಖೆಯ ಕಾರ್ಯನಿರ್ವಹಣೆ ಮತ್ತು ಆಡಳಿತಕ್ಕೆ ಪೂರಕವಾಗಿದ್ದುದು ಯಾವುದೇ ತಾರತಮ್ಯವಿರುವುದಿಲ್ಲ. |
| ಇ | ಕಾರಾಗೃಹ ಮತ್ತು ಅಗ್ನಿಶಾಮಕ ಇಲಾಖೆಯಲ್ಲಿ ಎಎಸ್ಐ ಮತ್ತು ಪಿಎಸ್ಐ ರವರುಗಳು ವಾರ್ಷಿಕ ಗೆಜೆಟ್ 30 ದಿನಗಳ ವೇತನವನ್ನು ಪಡೆದಿದ್ದು, ಪೊಲೀಸ್ ಇಲಾಖೆ ಎಎಸ್ಐ ಮತ್ತು ಪಿಎಸ್ಐ ರವರುಗಳು ವಾರ್ಷಿಕ ಗೆಜೆಟ್ 15 ದಿನ ವೇತನವನ್ನು ಮಾತ್ರ ಪಡೆಯುತ್ತಿದ್ದು, ಈ ತಾರತಮ್ಯವನ್ನು ಸರಿಪಡಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ; ಸಂಪೂರ್ಣ ಮಾಹಿತಿಯನ್ನು ನೀಡುವುದು; | ಪ್ರಸ್ತುತ ಪೊಲೀಸ್ ಇಲಾಖೆಯ ಎಎಸ್ಐ ಮತ್ತು ಪಿಎಸ್ಐ ರವರುಗಳಿಗೆ ನೀಡಲಾಗುತ್ತಿರುವ 15 ದಿನಗಳ ಪತ್ರಾಂಕಿತ ರಜಾ ವೇತನದ ಬದಲಿಗೆ 30 ದಿನಗಳ ಪತ್ರಾಂಕಿತ ರಜಾ ವೇತನವನ್ನು ನೀಡಲು ಹಾಗೂ ಹಾಗೂ ಪಿಐ ಹುದ್ದೆಯಿಂದ ಎಸ್‌ಪಿ (ನಾನ್ ಐಪಿಎಸ್) ಹುದ್ದೆಯವರಿಗೆ 30 ದಿನಗಳ ಪತ್ರಾಂಕಿತ ರಜಾ ವೇತನ ನೀಡುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ. |
| ಈ | ಎಎಸ್ಐ ರವರುಗಳು ಬೆಂಗಳೂರು ನಗರ ಮತ್ತು ರಾಜ್ಯದಲ್ಲಿ ಪ್ರತಿನಿತ್ಯ 12 ರಿಂದ 18 ಗಂಟೆಗಳ ಕಾಲ ಕರ್ತವ್ಯವನ್ನು ನಿರ್ವಹಿಸುತ್ತಿದ್ದು, ಅವರಿಗೆ ವಾರದ ರಜೆ ಅಥವಾ ಅನುಮತಿಯನ್ನು ವಾರದಲ್ಲಿ ಒಂದು ದಿವಸ ನೀಡುವ ಸಂಬಂಧ ಸರ್ಕಾರದಲ್ಲಿ ಪ್ರಸ್ತಾವನ ಇದೆಯೇ; ಇದ್ದಲ್ಲಿ ಕೈಗೊಂಡ ಕ್ರಮಗಳೇನು? | ಎಎಸ್ಐ ವೃಂದದ ಅಧಿಕಾರಿಗಳಿಗೆ ವಾರದ ರಜೆ ನೀಡುವ ಕುರಿತು ಯಾವುದೇ ಪ್ರಸ್ತಾವನೆ ಇಲಾಖೆಯ ಪರಿಶೀಲನೆಯಲ್ಲಿರುವುದಿಲ್ಲ.<br><br>ಪೊಲೀಸ್ ಅಧಿಕಾರಿಗಳಿಗೆ ಅವರ ಹಕ್ಕಿನಲ್ಲಿರುವ ಸಾಂದರ್ಭಿಕ ರಜೆ, ಗಳಿಕೆ ರಜೆ, ಪರಿವರ್ತಿತ ರಜೆ ಹಾಗೂ ಪತ್ರಾಂಕಿತ ರಜೆ ದಿನಗಳಲ್ಲಿ ಅನುಮತಿ ರಜೆಯನ್ನು ನಿಯಮಾನುಸಾರ ಮಂಜೂರು ಮಾಡಲಾಗುತ್ತಿದೆ. |

**ಸಂಖ್ಯೆ: ಒಇ 267 ಪಿಇಐ 2026**

(ಪ್ರಿಯಾಂಕ್ ಖರ್ಗೆ)
ಗೃಹ ಸಚಿವರು